# ಬೆಂಗಳೂರು ವಿಶ್ವವಿದ್ಯಾಲಯ

ಜ್ಞಾನಭಾರತಿ, ಬೆಂಗಳೂರು-560 056

ಸಂಖ್ಯೆ: ಕು.ಆ.ಕಾ:ವಿ.ವೇ/2019-20

ದಿನಾಂಕ: 13.09.2019

## ಸುತ್ತೋಲೆ

**ವಿಷಯ:** ಬೆಂಗಳೂರು ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಡುವ ಸಂಯೋಜಿತ ಸರ್ಕಾರಿ /ಸರ್ಕಾರದ ಅನುದಾನ ಪಡೆಯುತ್ತಿರುವ/ಬಿ ಬಿ ಎಂ ಪಿ/ಖಾಸಗಿ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡುತ್ತಿರುವ ಬಗ್ಗೆ.

**ಉಲ್ಲೇಖ:** ಇಡಿ 168 ಯುಎನಿ 2019, ದಿನಾಂಕ 11.09.2019.

****

ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಒಳಪಡುವ ವಿಶ್ವವಿದ್ಯಾಲಯಗಳ ಕುಲಸಚಿವರುಗಳನ್ನು ದಿನಾಂಕ 12.09.2019 ರಂದು ಸಭೆಗೆ ಆಹ್ವಾನಿಸಿದ್ದು, ಸದರಿ ಸಭೆಯಲ್ಲಿ ಎಲ್ಲಾ ಕುಲಸಚಿವರು ತಮ್ಮ ವ್ಯಾಪ್ತಿಗೆ ಒಳಪಡುವ ಸಂಯೋಜಿತ ಸರ್ಕಾರಿ /ಸರ್ಕಾರದ ಅನುದಾನ ಪಡೆಯುತ್ತಿರುವ/ಬಿ ಬಿ ಎಂ ಪಿ/ಖಾಸಗಿ ಕಾಲೇಜುಗಳ ಮಾಹಿತಿಯನ್ನು AISHE CODEನೊಂದಿಗೆ ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶ (POST MATRIC) ಕ್ಕೆ ಅಪ್-ಲೋಡ್ ಮಾಡಲು ಸೂಚಿಸಿರುತ್ತಾರೆ. ಆದ್ದರಿಂದ ಕೆಳಕಂಡ ಮಾಹಿತಿಗಳನ್ನು ತಮ್ಮ ಕಾಲೇಜಿನ ಸಿಬ್ಬಂದಿಯೊಂದಿಗೆ* ಕಳುಹಿಸಲು ಕೋರಲಾಗಿದೆ.

1. AISHE CODE
2. 2019-20ನೇ ಶೈಕ್ಷಣಿಕ ಸಾಲಿಗೆ ತಮ್ಮ ಕಾಲೇಜಿಗೆ ವಿಶ್ವವಿದ್ಯಾಲಯ ಅನುಮತಿಸಿರುವ ಸ್ನಾತಕ/ಸ್ನಾತಕೋತ್ತರ ಪದವಿ/ಸ್ನಾತಕೋತ್ತರ ಡಿಪ್ಲೋಮಾಗಳ ಪಟ್ಟಿ(combination wise)
3. ಪ್ರತ್ಯೇಕ ಸ್ನಾತಕ ಪದವಿ/ ಸ್ನಾತಕೋತ್ತರ ಡಿಪ್ಲೋಮಾಗಳಿಗೆ ತಮ್ಮ ಕಾಲೇಜು ಪ್ರಸ್ತುತ ಸಾಲಿನಲ್ಲಿ ನಿಗದಿ.ಪಡಿಸಿರುವ ಶುಲ್ಕ ವಿವರ ಪಟ್ಟಿ (ಕಾಲೇಜಿನ Letter headನಲ್ಲಿ ಪ್ರಾಂಶುಪಾಲರಿಂದ ಧೃಢೀಕರಿಸಿರಬೇಕು)

ಸದರಿ ವಿಷಯವನ್ನು ಅತೀ ಜರೂರೆಂದು ಪರಿಗಣಿಸಿ ತಮ್ಮ ಸಿಬ್ಬಂದಿಯನ್ನು ಈ ಪತ್ರದೊಂದಿಗೆ ಲಗತ್ತಿಸಿರುವ ಸ್ಲಾಟ್ ಪಟ್ಟಿಯಲ್ಲಿ ಸೂಚಿಸಿರುವ ದಿನಾಂಕದಂದು ತಪ್ಪದೆ ಕಳುಹಿಸಿ ತಮ್ಮ ಕಾಲೇಜಿನ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಪಡೆಯಲು ಅನುವು ಮಾಡಿಕೊಡ ಬೇಕೆಂದು ಈ ಮೂಲಕ ಕೋರಲಾಗಿದೆ. ತಪ್ಪಿದ್ದಲ್ಲಿ ಪ್ರಸ್ತುತ ಸಾಲಿನಲ್ಲಿ ತಮ್ಮ ಕಾಲೇಜಿನಲ್ಲಿ ವ್ಯಾಸಂಗ ಮಾಡುವ/ತ್ತಿರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವು ಮಂಜೂರಾಗುವುದಿಲ್ಲವೆಂದು ಈ ಮೂಲಕ ತಿಳಿಸಲಾಗಿದೆ.

*** ಸೆನೆಟ್ ಸಭಾಂಗಣ ಆಡಳಿತ ಕಛೇರಿ,**
**ಜ್ಞಾನಭಾರತಿ, ಬೆಂಗಳೂರು-560 056**

ಕುಲಸಚಿವರು 13/9/2019.

ಗೆ,

1. ಬೆಂಗಳೂರು ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಡುವ ಸಂಯೋಜಿತ ಕಾಲೇಜಿನ ಪ್ರಾಂಶುಪಾಲರಿಗೆ.
2. ಪ್ರಾಂಶುಪಾಲರು, ವಿಶ್ವವಿದ್ಯಾಲಯ ಕಾನೂನು ಕಾಲೇಜು/ದೈಹಿಕ ಶಿಕ್ಷಣ ಕಾಲೇಜು/ ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

ಪ್ರತಿಗಳು:-1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬಹುಮಹಡಿ ಕಟ್ಟಡ, ಬೆಂಗಳೂರು-01.

2. ವಿಶೇಷಾಧಿಕಾರಿಗಳು ಹಾಗೂ ರಾಜ್ಯ RUSA CONVENER, E-Governance Unit, Education Department(Higher Education), M S Building, Ambedkar Veedhi, Bangalore-1.